ವೀರಶೈವಸಾಹಿತ್ಯಭಾಂಡಾರ ಗ್ರಂಥಮಾಲೆ ೪.

ಶ್ರೀ

ಬಸವಚರಿತ್ರೆಯ ಹಾಡು

ಕೃತಿಕರ್ತರು:

ಶ್ರೀ ಮಾ. ನಂ. ನಂಜಪ್ಪನವರು

ಪ್ರಕಾಶಕರು:

ಮಾ. ನಂ. ಶಿವಪ್ಪ ಸಹೋದರರು

ಒಡೆಯರು:

ವೀರಶೈವಸಾಹಿತ್ಯ ಭಾಂಡಾರ

ಬೆಂಗಳೂರು ನಗರ

೧೯೪೫ ಬೆಲೆ: ೩ ಆಣೆ

ನಮ್ಮಲ್ಲಿ ದೊರೆಯುವ ಪುಸ್ತಕಗಳು.

	ರೂ.	ಆ.	ಕಾ.
ಸರ್ವಜ್ಞ ವಚನಗಳು (ಶೆ: ಬಿನಾವೃತ್ತಿ)	೨	೦	೦
ಸರ್ವಜ್ಞ ವಚನಗಳು (ಜನಪದಾವೃತ್ತಿ)	೧	೬	೦
ಸರ್ವಜ್ಞ ವಚನಗಳು (ಅಗ್ಗದಾವೃತ್ತಿ)	೦	೧೨	೦
ಬಸವೇಶ್ವರನೂ ಅಸ್ಪೃಶ್ಯರ ಉದ್ಧಾರವೂ	೦	೬	೦
ಅನುಭವ ಮಂಟಪ	೦	೪	೦
ಬಸವೇಶ್ವರನೂ ಕರ್ಣಾಟಕದ ಅಭ್ಯುದಯವೂ	೦	೪	೦
ಸಂಕ್ಷಿಪ್ತ ಲಿಂಗಪೂಜಾ ವಿಧಿ	೦	೪	೦
ಬಸವ ಚರಿತ್ರೆಯ ಹಾಡು	೦	೪	೦
ಶ್ರೀ ಬಸವಣ್ಣನವರು	೦	೮	೦
ವೀರಶೈವ ಮತಾಚಾರ್ಯರ ಕಾಲನಿರ್ಣಯ	೦	೧೨	೦
ರಾಜಶೇಖರವಿಳಾಸಂ	೨	೦	೦
ವೀರಶೈವ ವಾದ ವಿಮರ್ಶೆ	೦	೨	೦
ಅಖಂಡೇಶ್ವರ ವಚನಗಳು	೨	೮	೦
ಶ್ರೀ ಬಸವಣ್ಣನವರ ಅಮೃತವಾಣಿ	೨	೪	೦
ಯುಗ ಪ್ರವರ್ತಕ ಬಸವಣ್ಣನವರು	೧	೦	೦
ಸ್ತ್ರೀ ನೀತಿ ಮುಕ್ತಾಹಾರ	೦	೩	೦
ಸೌಂದರ ಪುರಾಣ	೧	೮	೦
ಗರ್ಭಾದಾನಾದಿ ದಶಕರ್ಮವಿಧಿ	೧	೦	೦
ನೂತನ ಗೃಹಪ್ರವೇಶ ವಿಧಿ	೧	೪	೦
ವಿವಾಹ ವಿಧಿ	೦	೧೨	೦
ವ್ರತಪಂಚಕ	೦	೬	೦
ವೈದಿಕ ಲಿಂಗಪೂಜಾ ವಿಧಿ (ಸ್ವರಯುಕ್ತ. ಅಚ್ಚಿನಲ್ಲಿದೆ)	೧	೦	೦
ಸುಬೋಧಸಾರ (ಮುಪ್ಪಿನ ಷಡಕ್ಷರಿ ವಚನ)	೧	೦	೦
ಕೈವಲ್ಯದರ್ಪಣ (ಬಾಲಲೀಲ ಮಹಂತ ಸ್ವಾಮಿಗಳ)	೧	೪	೦
ಬಸವ ಭೂಮಿ	೦	೪	೦
ಶತಕತ್ರಯ	೧	೪	೦
Sayings of Basavanna	0	8	0
ಬಸವರಾಜದೇವರ ರಗಳೆ	೧	೦	೦
ಸಿದ್ಧರಾಮ ಚಾರಿತ್ರ	೧	೮	೦

(ಕಡೆಪುಟ ನೋಡಿ)

ವೀರಶೈವಸಾಹಿತ್ಯಭಾಂಡಾರ ಗ್ರಂಥಮಾಲೆ ೪.

ಶ್ರೀ

ಬಸವಚರಿತ್ರೆಯ ಹಾಡು

ಕೃತಿಕರ್ತರು:

ಶ್ರೀ ಮಾ. ನಂ. ನಂಜಪ್ಪನವರು
ಬೆಂಗಳೂರು ನಗರ

—:—

ಪ್ರಕಾಶಕರು :

ವೀರಶೈವ ಸಾಹಿತ್ಯ ಭಾಂಡಾರ
ಒಡೆಯರು: ಮಾ. ನಂ. ಶಿವಪ್ಪ ಸಹೋದರರು, ಬೆಂಗಳೂರು ನಗರ

೧೯೪೫

ಬೆಲೆ — ೩ — ಆಣೆ

ಪ್ರಕಾಶಕರು:—

ಮಾ. ನಂ. ಶಿವಪ್ಪ ಸಹೋದರರು

ಒಡೆಯರು:—

ವೀರಶೈವಸಾಹಿತ್ಯ ಭಾಂಡಾರ

ಚಿಕ್ಕಪೇಟೆ ಚೌಕ, ಬೆಂಗಳೂರು ನಗರ.

೧೦೦೦ ಪ್ರತಿಗಳು

ಮುದ್ರಕರು :

ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು,

ಸ್ವತಂತ್ರ ಕರ್ಣಾಟಕ ಮುದ್ರಣಾಲಯ,

ಬೆಂಗಳೂರು ನಗರ.

ವಿಷಯ ಸೂಚಿಕೆ

ಪ್ರಕಾಶಕರ ನುಡಿ ೧
ಬಿನ್ನಹ ೨
ಮುನ್ನುಡಿ ೩

ಘಟ್ಟ. ಪುಟ.

೧ ಬಸವಣ್ಣನವರ ಜನನ ೧
೨ ಬೆಳವಣಿಗೆ–ಗೃಹತ್ಯಾಗ ೨
೩ ಕಪ್ಪಡಿಕ್ಷೇತ್ರ ಪ್ರವೇಶ–ಗುರುಕುಲವಾಸ–ಮಂಗಳವಾಡಕ್ಕೆ ಪ್ರಯಾಣ ೪
೪ ಕರಣಸಾಲೆಯ ಲೆಕ್ಕದ ತಪ್ಪನ್ನು ತೋರಿಸುವುದು–ಸಿದ್ದಣ್ಣ ಮಂತ್ರಿಯ ಆಶ್ರಯ–ಮಂತ್ರಿಪದ ಸ್ವೀಕಾರ–ವಿವಾಹ. ೯
೫ ಶೈವದಉದ್ಧಾರ–ಅನುಭವಮಂಟಪಸ್ಥಾಪನೆ–ವೀರಶೈವ ಸಿದ್ಧಾಂತಸ್ಥಾಪನೆ–ಮರಳಿ ಕಪ್ಪಡಿ ಸಂಗಮಕ್ಕೆಪ್ರಯಾಣ. ೧೨
೬ ದಿವ್ಯಬೋಧೆಯ ಸಂಗ್ರಹ–ಮಂಗಳ. ೧೪
ಬಸವೇಶ್ವರಸ್ತೋತ್ರ ಶ್ರೀ ಮೈಲಾರಬಸವಪ್ಪನವರು ರಚಿಸಿದುದು ೧೬
ಕಠಿಣ ಶಬ್ದಗಳ ಅರ್ಥ ೧೯

ಚಿತ್ರಗಳು:

೧ ಬಾಗೆವಾಡಿಯ ಶ್ರೀ ಬಸವೇಶ್ವರ ದೇವಸ್ಥಾನ
೨ ಕೂಡಲ ಸಂಗಮೇಶ್ವರ ಮಂಟಪ
೩ ಶ್ರೀ ಬಸವಣ್ಣನವರು
೪ ಶ್ರೀ ನೀಲಾಂಬಿಕಾ ದೇವಿಯವರು

ಪ್ರಕಾಶಕರ ನುಡಿ

ಮಹಾನುಭಾವರಾದ ಶ್ರೀ ಬಸವಣ್ಣನವರ ವಿಚಾರವಾಗಿ ನಾನಾ ವಿಧವಾದ ಸಾಹಿತ್ಯ ಪ್ರಕಟವಾಗುತ್ತಿದೆ. ಆದರೆ ಮಕ್ಕಳಿಗೂ ಮಹಿಳೆಯರಿಗೂ ಸರಳವಾಗಿ ಸುಲಭವಾಗಿ ಹಾಡಿಕೊಂಡು ಅರ್ಥಮಾಡಿಕೊಂಡು ಯಾವಾಗಲೂ ಕಂಠಸ್ಥವಾಗಿಸಿಕೊಳ್ಳುವಂತಹ ಸಾಹಿತ್ಯ ಪ್ರಕಟಣೆಯು ಮಾತ್ರ ಶೀರ ಕಡಿಮೆಯೆಂದೇ ಹೇಳಬಹುದು.

ಈ "ಬಸವ ಚರಿತ್ರೆಯ ಹಾಡು" ಅಂತಹ ಕೊರತೆಯನ್ನು ಕೊಂಚ ಮಾತ್ರವಾದರೂ ನೀಗಿಸಲೆಂಬ ಉದ್ದೇಶದಿಂದಲೇ ಪ್ರಕಟವಾಗುತ್ತಿದೆ. ಇದು ನಮ್ಮ ವೀರಶೈವ ಸಾಹಿತ್ಯ ಭಾಂಡಾರ ಗ್ರಂಥಮಾಲೆಯ ನಾಲ್ಕನೆಯ ಪ್ರಕಟಣೆ.

ನಮ್ಮ ನಾಡಿನ ಸಾಹಿತ್ಯಕೋವಿದರಾದ ಕೀರ್ತನಕೇಸರಿ, ವೇ॥ ಬಿ. ಶಿವಮೂರ್ತಿಶಾಸ್ತ್ರಿಗಳವರು ಈ ಪುಟ್ಟ ಪುಸ್ತಕಕ್ಕೆ ಮುನ್ನುಡಿಯನ್ನು ಬರೆದು ಪ್ರೋತ್ಸಾಹಿಸಿದ್ದಾರೆ ಇದಕ್ಕಾಗಿ ಅವರಿಗೆ ವಂದನೆಗಳು.

ಮಹಾತ್ಮರಾದ ಶ್ರೀ ಬಸವಣ್ಣನವರ ಜೀವಿತವನ್ನು ಕುರಿತ ಈ ಹಾಡು ಮುಂದೆ ಬಹು ಕಾಲ ಜನಪ್ರಿಯವಾಗಿ ನಿಲ್ಲುವಂತಾಗಲೆಂದು ಹಾರೈಸುತ್ತೇವೆ.

ಕನ್ನಡಿಗರೆಲ್ಲರೂ ಈ ಕೃತಿಯನ್ನು ಮಕ್ಕಳಿಂದಲೂ ಮಹಿಳೆಯರಿಂದಲೂ ಹಾಡಿಸಿ ತಿಳಿದುಕೊಂಡು ಸಂತೋಷದಿಂದ ನಲಿಯುವಂತಾದರೆ ಕೃತಿಕರ್ತರ-ಪ್ರಕಾಶಕರ ಶ್ರಮವು ಸಾರ್ಥಕವಾದೀತೆಂದು ನಂಬಿದ್ದೇವೆ.

ಬಸವ ಶಕ : ೮೧೪
ತಾ॥ ೧-೧-೧೯೪೫

ಮಾ. ನಂ. ಶಿವಪ್ಪ ಸಹೋದರರು
ಪ್ರಕಾಶಕರು.

ಬಿನ್ನಹ

—o—

ಶ್ರೀ ಬಸವೇಶ್ವರ ಚರಿತ್ರೆಯನ್ನು ಗೋವಿನಹಾಡಿನ ಧಾಟಿಯಲ್ಲಿ ರಚಿಸಿದರೆ ಜನಸಾಮಾನ್ಯರಿಗೂ ಮಹಿಳೆಯರಿಗೂ ಮಕ್ಕಳಿಗೂ ಶ್ರೀ ಬಸವಣ್ಣನವರ ದಿವ್ಯ ಜೀವಿತವನ್ನು ತಿಳಿದುಕೊಳ್ಳಲೂ ಸ್ವತಃ ಹಾಡಿ ಕೊಳ್ಳಲೂ ಅನುಕೂಲವಾದೀತು- ಸುಲಭವಾದೀತು ಎಂಬ ಒಂದು ಅಭಿಲಾಷೆಯು ಮೂಡಿದುದರ ಫಲವಾಗಿ ಈ ಕೃತಿಯನ್ನು ರಚಿಸ ಲಾಗಿದೆ.

ಈ 'ಬಸವ ಚರಿತ್ರೆಯ ಹಾಡಿ'ನ ಕಥಾ ವಸ್ತುವನ್ನು ಹರಿಹರ ಮಹಾ ಕವಿಯ ಬಸವರಾಜದೇವರ ರಗಳೆಯ ಕಥೆಯೊಳಗಣ ಕೊಂಚ ಬದಲಾವಣೆಯೊಡನೆಯೂ 'ವಚನಶಾಸ್ತ್ರ ಜೀರ್ಣೋದ್ಧಾರಕ' ರಾದ ರಾವ್‌ಬಹದ್ದೂರ್ ಫ. ಗು. ಹಳಕಟ್ಟಿ ಬಿ.ಎ. ಎಲ್.ಎಲ್.ಬಿ., ಅವರ 'ಬಸವೇಶ್ವರ ಚರಿತ್ರೆ' ಎಂಬ ಲೇಖಾಂಕಗಳೊಳಗಣ ಕೆಲವು ಅಭಿಪ್ರಾಯಗಳನ್ನು ಆರಿಸಿಕೊಂಡೂ ಹೆಣೆಯಲಾಗಿದೆ.

ಅದ್ಭುತಗಳನ್ನೂ ಪವಾಡಗಳನ್ನೂ ಆದಷ್ಟು ಕಡಿಮೆ ಮಾಡಿ ಸಾಧ್ಯವಾದಮಟ್ಟಿಗೂ ಸಹಜವಾಗಿ ಕಥಾ ನಿರೂಪಣೆ ಮಾಡಲಾಗಿದೆ. ಮಾನವ ಕುಲಕ್ಕೆ ನಂದಾದೀಪದಂತಿರುವ ಶ್ರೀ ಬಸವಣ್ಣನವರ ಜೀವಿತ ವನ್ನು ಕುರಿತ ಈ "ಬಸವ ಚರಿತ್ರೆಯ ಹಾಡನ್ನು" ಕನ್ನಡಿಗರೆಲ್ಲರೂ ಮಕ್ಕಳಿಂದಲೂ ಮಹಿಳೆಯರಿಂದಲೂ ಓದಿಸಿ - ಹಾಡಿಸಿ - ಅರ್ಥೈಸಿ ಕೊಂಡು ಸಂತೋಷಪಟ್ಟರೆ ಕೃತಿಕರ್ತನ ಶ್ರಮವನ್ನು ಸಾರ್ಥಕ ಗೊಳಿಸಿದಂತಾಗುತ್ತದೆ.

ಬಸವ ಶಕ : ೮೧೪
ತಾ॥ ೧-೧-೧೯೪೫.

ಮಾ. ನಂ. ನಂಜಪ್ಪ.

ಮುನ್ನುಡಿ

ಪುಣ್ಯದ ಬೀಡಾದ ಕನ್ನಡ ನಾಡಿನಲ್ಲಿ ಶ್ರೀ ಬಸವೇಶ್ವರನನ್ನು ಕುರಿತು ಆಗಿರುವಷ್ಟು ಗ್ರಂಥಗಳು ಮತ್ತಾವ ವಿಭೂತಿಯನ್ನೂ ಕುರಿತು ಹುಟ್ಟಿಲ್ಲ. ಇದು ಬಸವಣ್ಣನವರ ಜನಪ್ರಿಯತೆಗೂ, ಪ್ರಭಾವ ಮುದ್ರೆಗೂ ನಿದರ್ಶನ. ಶ್ರೀ ಬಸವೇಶ್ವರನನ್ನು ಭಕ್ತಿಯುಗದ ಆಚಾರ್ಯ, ಭಕ್ತಿಭಾಂಡಾರಿ, ಕನ್ನಡ ಸಾಹಿತ್ಯದ ಉದ್ಧಾರಕ, ಹಿಂದೂ ಸಮಾಜದ ಸುಧಾರಕ, ವೀರಶೈವ ಧರ್ಮಸ್ವರೂಪ, ನಂದೀಶ್ವರನ ಅವತಾರಿ, ದ್ವಿತೀಯ ಶಂಭು, ಇತ್ಯಾದಿಯಾಗಿ ಪ್ರಾಚೀನ ಕಾಲದಿಂದ ಇಂದಿನ ವರೆಗೆ ಶರಣರೂ ಕವಿಗಳೂ ಬಗೆಬಗೆಯಿಂದ ಹಾಡಿದ್ದಾರೆ. ಕನ್ನಡ, ಸಂಸ್ಕೃತ, ತಮಿಳು, ತೆಲುಗು ಮತ್ತು ಮರಾಠಿ ಭಾಷೆಗಳಲ್ಲಿ ಈ ಮಹಾತ್ಮನನ್ನು ಕುರಿತು ಹಲವು ಮಂದಿ ಮಹಾಕವಿಗಳು ಕಾವ್ಯಗಳನ್ನು ಬರೆದಿದ್ದಾರೆ.

ಬಸವಣ್ಣನವರು ಕೇವಲ ಸತ್ಪುರುಷರೇ ಅಲ್ಲದೆ ಸ್ವಯಂ ಮಹಾಕವಿಯೂ ಆಹುದು. ಅವರು ವಚನಶಾಸ್ತ್ರದ ರಚನೆಗೆ ಆಧಾರಪುರುಷರು. ಕನ್ನಡದಲ್ಲಿ ಷಟ್ಸ್ಥಲವಚನ, ಶಿಖಾರತ್ನವಚನ, ಕಾಲಜ್ಞಾನ ವಚನ, ಮತ್ತು ಮಂತ್ರಗೋಪ್ಯ ಎಂಬ ನಾಲ್ಕು ಗ್ರಂಥಗಳನ್ನು ಬರೆದಿದ್ದಾರೆ. ಇವುಗಳಲ್ಲಿ ಮೊದಲನೆಯ ಷಟ್ಸ್ಥಲ ವಚನವು ಬಿಜಾಪುರದ ಶಿವಾನುಭವ ಗ್ರಂಥಮಾಲೆಯಲ್ಲಿ ಪ್ರಕಟವಾಗಿ ಕನ್ನಡಿಗರಿಗೆಲ್ಲ ಪರಿಚಿತವಾಗಿದೆ. ಉಳಿದ ಮೂರು ಗ್ರಂಥಗಳು ಪ್ರಕಟವಾಗುವುದು ಬಸವಣ್ಣನವರ ಚರಿತ್ರೆಯ ದೃಷ್ಟಿಯಿಂದಲೂ ಕನ್ನಡಸಾಹಿತ್ಯದ ಹಿತದೃಷ್ಟಿಯಿಂದಲೂ ಅವಶ್ಯವಾಗಿದೆ.

ಶ್ರೀ ಬಸವೇಶ್ವರನು ವಿಜಾಪುರ ಜಿಲ್ಲಾ ಇಂಗಳೇಶ್ವರ ಬಾಗೆವಾಡಿಯವನು. ಮಾದರಸ ಮಾದಲಾಂಬಿಕೆಯರ ಸುಪುತ್ರನು. ಕಪ್ಪಡಿ ಸಂಗಮದ ಜಾತವೇದಸ್ವಾಮಿ ಅಥವಾ ಈಶಾನ್ಯ ಗುರುವಿನ ಶಿಷ್ಯನು. ಕಪ್ಪಡಿಯಲ್ಲಿ ಬಹುಕಾಲ ವಿದ್ಯಾಭ್ಯಾಸ ಮಾಡಿದವನು.

ಕಲ್ಯಾಣದಲ್ಲಿ ಬಿಜ್ಜಳ ರಾಜನ ಮಂತ್ರಿಯಾಗಿ ಲೋಕಕಲ್ಯಾಣವನ್ನು ಸಾಧಿಸಿದವನು. ಅನುಭವ ಮಂಟಪದ ಸಂಸ್ಥಾಪಕನು. ಕಲ್ಯಾಣದ ಧರ್ಮ ಕ್ರಾಂತಿಗೆ ಮೂಲಪುರುಷನು. ಸುಮಾರು ಕ್ರಿ. ಶ. ೧೧೫೬ ರಿಂದ ೧೧೬೭ ರ ವರೆಗೆ ಕಲ್ಯಾಣದಲ್ಲಿ ಮಂತ್ರಿಯಾಗಿದ್ದನು. ಈತನ ಜೀವನ ಕಾಲ ಸುಮಾರು ೧೧೩೨ ರಿಂದ ೧೧೬೮, ಅಂದರೆ ೩೬ ವರ್ಷಗಳು ಮಾತ್ರ. ಇಂತಿಷ್ಟು ಬಸವಣ್ಣನವರ ಪರಿಚಯ.

ಶ್ರೀ ಬಸವೇಶ್ವರನನ್ನು ಕುರಿತು ಹಂಪೆಯ ಹರೀಶ್ವರ, ಭೀಮ ಕವಿ, ಪಾಲ್ಕುರಿಕೆ ಸೋಮನಾಥ, ಕಂಚಿಯ ಶಂಕರಾರಾಧ್ಯ, ಸಿಂಗಿರಾಜ, ಷಡಕ್ಷರದೇವ ಮೊದಲಾದ ಪ್ರಾಚೀನ ಮಹಾಕವಿಗಳು ಉದ್ದಾಮವಾದ ಕಾವ್ಯಗಳನ್ನು ಬರೆದಿದ್ದಾರೆ. ಆಧುನಿಕ ಸಾಹಿತ್ಯದಲ್ಲಿಯೂ ಈ ಮಹಾತ್ಮನನ್ನು ಕುರಿತು ಹಲವು ಮಹತ್ವದ ಗ್ರಂಥಗಳು ಪ್ರಕಟವಾಗಿವೆ. ಬಸವಣ್ಣನವರ ವಚನಪ್ರಚಾರವು ನಾಡಿನತುಂಬ ನಡೆದಿದೆ. ಇಂತಹ ಸುಸಮಯದಲ್ಲಿ ಬಸವಣ್ಣನವರ ಚರಿತ್ರೆಯನ್ನು ಕುರಿತು ಹಾಡಲು ಈ ಚಿಕ್ಕ ಪುಸ್ತಕವು ಪ್ರಕಟವಾದುದು ಸಮಯೋಚಿತವಾಗಿಯೇ ಇದೆ.

ಈ ಗ್ರಂಥ ಲೇಖಕರಾದ ಶ್ರೀಮಾನ್ ಮಾ. ನಂ. ನಂಜಪ್ಪನವರು ಕನ್ನಡದ ಅಭಿಮಾನಿಗಳು. ಹಲವು ಪತ್ರಿಕೆಗಳಲ್ಲಿ ಈಗಾಗಲೇ ಅವರು ಬರೆದ ಲೇಖನಗಳೂ, ಕವಿತೆಗಳೂ ಪ್ರಕಟವಾಗಿವೆ. ಹಲವಾರು ಗ್ರಂಥಗಳನ್ನು ಕೂಡ ಅವರು ಪ್ರಕಟಿಸಿದ್ದಾರೆ. ಇವರಿಗೆ ಕವಿತೆಯು ನಿರಾಯಾಸವಾಗಿ ಪ್ರಾಪ್ತವಾಗಿದೆ. 'ಬಸವಚರಿತ್ರೆಯಹಾಡು' ಎಂಬ ಈ ಗ್ರಂಥವನ್ನು ಅವರು ಸುಲಭವಾದ ಸರಳವಾದ ಶೈಲಿಯಲ್ಲಿ ಬರೆದಿದ್ದಾರೆ. ಈ ಹಾಡು ಕನ್ನಡಿಗರಿಗೆ ಚಿರಪರಿಚಿತವಾದ 'ಗೋವಿನ ಹಾಡು' ಧಾಟಿಯಲ್ಲಿದೆ. ಅಂದರೆ ಸಾಂಗತ್ಯದ ಛಂದಸ್ಸಿನಲ್ಲಿ ರಚಿತವಾಗಿದೆ. ಈ ಛಂದಸ್ಸು ಕನ್ನಡಿಗರಿಗೆ ಬಹು ಪ್ರಿಯವಾದುದೆಂಬುದಕ್ಕೆ ಭರತೇಶವೈಭವ, ನೇಮಿಜಿನೇಶ ಸಂಗತಿ, ಕುಮಾರರಾಮನ ಸಾಂಗತ್ಯ ಮೊದಲಾದ ಮಹಾಕಾವ್ಯಗಳು ಈ ಛಂದಸ್ಸಿನಲ್ಲಿ ವಿರಚಿತವಾಗಿರುವುದೇ ಇದಕ್ಕೆ ನಿದರ್ಶನವಾಗಿದೆ. ಆದುದರಿಂದ ಬಸವಣ್ಣನವರ ಚರಿತ್ರೆಯನ್ನು ಕುರಿತಾದ ಈ ಹಾಡುಗಳು ನಮ್ಮ ಜನರಿಗೆ ಹೆಚ್ಚು ಪ್ರಿಯವಾಗುವುವೆಂದು ನಾವು ನಿರೀಕ್ಷಿಸಬಹುದು.

'ಬಸವಚರಿತ್ರೆಯ ಹಾಡು' ಒಬ್ಬ ಧಾರ್ಮಿಕ ಮಹಾಪುರುಷನನ್ನು ಕುರಿತು, ಆಧರ್ಮದ ಅನುಯಾಯಿಯಾದ ಲೇಖಕರಿಂದ ಭಕ್ತಿಭಾವದಿಂದ ವಿರಚಿತವಾದುದು. ಆದ್ದರಿಂದ ಇದನ್ನು ಒಂದು ದೃಷ್ಟಿಯಿಂದ 'ಭಕ್ತಿಗೀತೆ' ಎಂದು ಕರೆಯಬಹುದು. ಶರಣರ ವಚನಗಳು, ಯೋಗಿಗಳ ಹಾಡುಗಳು, ದಾಸರ ಸುಳಾದಿ, ಮತ್ತು ಉಗಾಭೋಗಗಳು, ಇತ್ಯಾದಿಗಳನ್ನು ಹೇಗೆ ನಾವು 'ಭಕ್ತಿಸಾಹಿತ್ಯ' ಎಂದು ಕರೆಯುತ್ತೇವೆಯೋ ಹಾಗೆಯೇ ಇಂತಹ ಹಾಡುಗಳನ್ನೂ ಭಾವಿಸಬೇಕಾಗುತ್ತದೆ. ಇಂಥವು ಆತ್ಮಾನಂದದಿಂದ ಆತ್ಮೋದ್ಧಾರಕ್ಕೆ ಹಾಡಿದ ಭಾವಗೀತೆಗಳು. ಆದುದರಿಂದ ಈ ಹಾಡುಗಳ ರಸಭಾವಗಳ ಕಡೆಗೆ ಮನಗೊಡುವುದು ವಾಚಕರ ಮುಖ್ಯ ಗುರಿಯಾಗಿರಬೇಕು.

ಬಸವರಾಜ ದೇವರರಗಳೆ, ಬಸವಪುರಾಣಾದಿ ಪ್ರಾಚೀನ ಮಹಾಕಾವ್ಯಗಳಿರುವಾಗ ಇಂತಹ ಕಿರಿಹೊತ್ತಿಗೆಗಳಿಂದೇನು ಪ್ರಯೋಜನ ಎಂದು ಜನರು ಭಾವಿಸದಿರಲಿ. ಸಿಲವುಗನ್ನಡಿಗಳ ಮನೆಯಲ್ಲಿ ಬಾಳುವೆ ಮಾಡುವ ಮುತ್ತೈದೆಗೆ ಕೈಗನ್ನಡಿಯು ಪ್ರಿಯವಾಗುವಂತೆ, ದೊಡ್ಡ ದೊಡ್ಡ ವಿದ್ಯುಚ್ಛಕ್ತಿಯ ದೀಪಗಳಿಂದ ಕೂಡಿದ ಮನೆಗೆ ಚಿಕ್ಕದೊಂದು ಹಣತೆಯು ಅವಶ್ಯವಿರುವಂತೆ, ಮೈತುಂಬ ರತ್ನಾಭರಣಗಳಿಂದ ಅಲಂಕೃತಳಾದ ಸುಂದರ ವನಿತೆಗೆ ಮುತ್ತಿನ ಮೂಗುತಿಯು ಬೇಕೆನಿಸುವಂತೆ ಇಂತಹ ಚಿಕ್ಕ ಪುಸ್ತಕಗಳೂ ಜನತೆಯ ಜೀವನಕ್ಕೆ ಬೇಕೆನಿಸುತ್ತವೆ.'ಬಸವ ಚರಿತ್ರೆಯ ಹಾಡು' ಇತಿಹಾಸಾಂಶಗಳಿಂದಲೂ ಬಸವೇಶ್ವರನ ವಚನಾರ್ಥಗಳಿಂದಲೂ ಕೂಡಿದೆ. ಆದುದರಿಂದ ಇದನ್ನು ಓದುವವರಿಗೂ, ಕಲಿತು ಹಾಡುವವರಿಗೂ ಹೆಚ್ಚಿನಲಾಭವುಂಟು.ನಮ್ಮ ನಾಡಿನ ಹೆಣ್ಣುಮಕ್ಕಳೂ ಸಣ್ಣಮಕ್ಕಳೂ ಇದರ ಲಾಭವನ್ನು ಪಡೆಯಲೆಂದು ನಮ್ಮ ಮನದ ಬಯಕೆ. ಇಂತಹ ಪುಸ್ತಕಗಳನ್ನು ಓದುವುದಕ್ಕಿಂತ ಹಾಡುವುದರಿಂದ ಹೆಚ್ಚಾದ ಆನಂದವುಂಟು. ಲಾಭವುಂಟು.

ಶ್ರೀ ಮಾ. ನಂ. ನಂಜಪ್ಪನವರು ಕನ್ನಡದಲ್ಲಿ ಆಗಾಗ್ಗೆ ಕವಿತೆಗಳನ್ನು ಬರೆಯುವುದುಂಟು. ಅವರ ಕವಿತೆಗಳು ಸಂಸ್ಕಾರದಿಂದ ಹೊರಸೂಸಿದವುಗಳು. ಕವಿತೆಯು ಕಲಿತರೆ ಬರತಕ್ಕುದಲ್ಲ. ಅದು ಸಂಸ್ಕಾರಜನ್ಯ. ದೇಶಾಟನ, ಶಾಸ್ತ್ರಾಧ್ಯಯನ, ಪಂಡಿತ ಭಾಷಣಾದಿಗಳು ಆ ಸಂಸ್ಕಾರದ ಪರಿಪೂರ್ಣತೆಗೆ ಸಹಾಯವಾದವುಗಳು.


ಕವಿಯ ಉದ್ದೇಶವು ತಾತ್ವಿಕ ದೃಷ್ಟಿಯಿಂದ ಕೂಡಿದಾಗ ಕವಿತೆ ಸಫಲವಾಗುತ್ತದೆ. ಕವಿ ಕೃತಾರ್ಥನಾಗುತ್ತಾನೆ. ಅಂಥವನ ಗ್ರಂಥಗಳನ್ನು ಓದುವವರು ನಿಜವಾದ ಕಾವ್ಯಾನಂದವನ್ನು ಪಡೆಯುತ್ತಾರೆ.

ಈ ಪುಟ್ಟಪುಸ್ತಕವನ್ನು ವೀರಶೈವ ಸಾಹಿತ್ಯಭಾಂಡಾರದ ಒಡೆಯರೂ, ಕನ್ನಡದ ಅಭಿಮಾನಿಗಳೂ, ಗ್ರಂಥಪ್ರಕಾಶಕರೂ ಆದ ಶ್ರೀ. ಮಾ. ನಂ. ಶಿವಪ್ಪಸಹೋದರರು ಸುಂದರವಾಗಿ ಪ್ರಕಟಿಸಿರುತ್ತಾರೆ.

ಈ ಬಸವ ಚರಿತ್ರೆಯಹಾಡು ಬಸವಣ್ಣನವರ ಚರಿತ್ರೆಯನ್ನು ಸಂಗ್ರಹವಾಗಿ ತಿಳಿಯಬೇಕೆನ್ನುವವರಿಗೂ, ಮಹಿಳೆಯರಿಗೂ, ಬಾಲಕರಿಗೂ ತುಂಬಾ ಉಪಯೋಗವಾಗಿದೆ. ಶ್ರೀಮಾನ್ ನಂಜಪ್ಪನವರು ಕೈಗೊಂಡ ಸಾಹಿತ್ಯ ಸೇವಾರೂಪವಾದ ಈ ಕಾರ್ಯವು ಮುಂದುವರಿಯಲಿ. ಕನ್ನಡಿಗರು ಅವರಹಾಡನ್ನು ಕೇಳಿ ಹರ್ಷಿಸಲಿ. ನಾಡು ನಲಿಯಲಿ. ನುಡಿಬೆಳಗಲಿ. ಕನ್ನಡಕುಲ ಕಳೆಗೊಳ್ಳಲಿ.

೧೦-೧೨-೧೯೪೪
ಬೆಂಗಳೂರು ನಗರ

ಬಿ. ಶಿವಮೂರ್ತಿಶಾಸ್ತ್ರೀ,
(ಶರಣಸಾಹಿತ್ಯ ಕಾರ್ಯಾಲಯ.)



ಶ್ರೀ ಬಸವಣ್ಣನವರು ಜನಿಸಿದ ಬಾಗೇವಾಡಿಯ ಶ್ರೀ ಬಸವೇಶ್ವರದೇವಾಲಯ



ಶ್ರೀ ಬಸವಣ್ಣನವರು ವಿದ್ಯಾಭ್ಯಾಸಮಾಡಿದ ಶ್ರೀ ಕಪ್ಪಡಿಕ್ಷೇತ್ರದ
ಕೃಷ್ಣಾ-ಮಲಾಪಹಾರಿ ನದಿಗಳ ಸಂಗಮಸ್ಥಾನದಲ್ಲಿರುವ
ಶ್ರೀ ಕೂಡಲಸಂಗಮೇಶ್ವರ ಮಂಟಪ

॥ ಶ್ರೀ ಗುರು ಬಸವಲಿಂಗಾಯ ನಮಃ ॥

ಬಸವ ಚರಿತ್ರೆಯ ಹಾಡು

ಘಟ್ಟ ೧

ಧರಣಿಮಂಡಲದೊಳಗೆ ಮೆರೆಯುವ
ವರಮಹಾತ್ಮರ ಗುಂಪಿನೊಳಗೆ
ಮಿರುಗುತಿಹ ಮಾಣಿಕ್ಯದಂತಿಹ
ಗುರುಬಸವನನು ಪೊಗಳುವೆ ೧

ಭರತಖಂಡದ ಸೊಗಸಿನಾಗರ
ನಿರುತ ವಿಶ್ವಕೆ ಧರ್ಮಸಾಗರ
ಸರಸಿಯಹ ಕನ್ನಡದ ನಾಡೊಳು
ಮಿರುಪ ಬಾಗೇವಾಡಿಯೋಳ್ ೨

ಅದರೊಡೆಯ ತಾ ವಿಪ್ರಭೂಷಣ
ಸದಯ 'ಮಾದರಸಾ'ರ್ಯ ನಾಮಕ
ಸುದತಿಮಣಿ ಸತಿ 'ಮಾದಲಾಂಬಿಕೆ'
ಮುದದೊಳಾಳುತಲಿರ್ದರು ೩

ಅವರ ಗರ್ಭದೊಳುದಯಿಸಿದ್ದಾ
ದೇವರಾಜನು ನಾಗಲಾಂಬಿಕೆ
ಭಾವಜಾರಿಯ ರೂಪಿ ಬಸವನು
ಮೂವರಿದ್ದರು ಮಕ್ಕಳು ೪

ಶಾಲಿವಾಹನ ಶಕ ಸಹಸ್ರದ
ಮೇಲೆ ಐವತ್ಮೂರು ವರುಷದ
ಶೀಲ ವೈಶಾಖದೊಳು ರೋಹಿಣಿ
ಯಲ್ಲಿ ಬಸವನು ಉದಿಸಿರೆ ೫

ಬಸವರಾಜನ ತಾಯಕನಸಿನೊ
ಳಸಮ ಬಸವಗೆ ಪುಟ್ಟುವಾಗಳೆ
ಒಸೆದು ಶ್ರೀ ಗುರು ಸಂಗಮೇಶನು
ಅಸಮ ಲಿಂಗವ ಧರಿಸಿರೆ ೬

ಮಾತೆಯ ಮನೋರಾಜ್ಯದೈಸಿರಿ
ಪಿತನ ಕಣ್ಗಳ ಸೊಂಪಿನಾಗರ
ಪ್ರೀತಿಯಿಂ ನೋಳ್ಪರ ನಯನಸುಧೆ
ಖ್ಯಾತ ಶಿಶು ಮಾಣಿಕ್ಯವು ೭

ಬಳೆಯುದೋಳಿನ ಭಾಗ್ಯನಿಧಿಯು
ಅಲರುಗಣ್ಗಳ ತೊದಲು ನುಡಿಗಳ
ನಳನಳಿಸ ಲಾವಣ್ಯದಾಯುಕ
ಹೊಳೆದು ಬಳೆಯುತಲಿದ್ದನು ೮

ಚೆಲುವ ಸಂಗನ ಗೆಲುವ ರಾಜನು
ಮೆಲುನಡೆಯ ಕಾರಣಿಕ ಬಾಲನು
ಬಾಲಲೀಲೆಯ ಬಸವರಾಜನು
ಲೀಲೆಯಿಂ ಬಳೆಯುತ್ತಿರೆ ೯

ಮಾರಹರ ನವತಾರಿ ಬಸವನು
ಸಾರಸುಖ ಸಂತಸದಿ ಬಳೆದಿರೆ
ಧಾರುಣಿಯು ಸ್ವಾಯಂಭು ಲಿಂಗಕೆ
ಧರೆಯ ತಾಯ್ತನ ವೊಲ್ಲದೋಲ್ ೧೦

ಸತ್ಯ ಶಿವಸುಂದರನ ಬಸವನ
ಹೆತ್ತ ತಾಯ್ತಂದೆಗಳು ಜೊತೆಯಲಿ
ಮರ್ತ್ಯಲೋಕವ ತೊರೆದು ಲಿಂಗದೊ
ಳರ್ತಿಯಿಂ ಬಯಲಾಗಲು ೧೧

—:o:—

ಘಟ್ಟ ೨

ಬಸವರಾಜನು ಸಸಿನೆಯಿಂದಲಿ
ಅಸಮತೇಜದೆ ರಾಜಿಸುತ್ತಲಿ
ರಸೆಯೊಳಗೆ 'ಮುತ್ತಬ್ಬೆ' ಪೋಷಿಸೆ
ಮಿಸುನಿಯೊಲು ರಂಜಿಸಿದನು ೧೨

ಭಸಿತ ಬಣ್ಣವನೇರುವಂತೆ
ಬಸವ ಯೌವನಶಾಲಿಯಾಗಲು
ಅಸಮಸೌಂದರ್ಯಾಂಗನಾಗುತ
ರಸೆಯ ರಕ್ಷಿಪ ಬಸವನು ೧೩

ಮೊಲ್ಲೆ ಮಲ್ಲಿಗೆ ಜಾಜಿ ಕೇತಕಿ
ಫುಲ್ಲ ಸುಮಗಳ ದುಂಡು ತುರುಬಿನ
ಚೆಲ್ವ ಭಸಿತತ್ರಿಪುಂಡ್ರನೊಸಲಿನ
ಉಲ್ಲಸದ ಬಸವಣ್ಣನು ೧೪

ಹುಟ್ಟಬಂದುರೆ ಜವ್ವನವನು
ದಿಟ್ಟಮೂರನ ಪೂಜೆಯೊಳಗೆ
ಇಟ್ಟುಬಾಳ್ವುದೆ ಶ್ರೇಷ್ಠವೆಂದು
ಘಟ್ಟಮಾಡುತ ಮನವನು ೧೫

ಶಿವನಭಕ್ತಿಯು ವರ್ಣಕರ್ಮವು
ಅವಕಾಲಕು ಒಂದು ಗೂಡದ
ಭಾವಸತ್ಯವನರಿತ ಬಸವನು
ಜೀವ ಶಿವ ಸಮರಸಿಕನು ೧೬

ವರ್ಣಕರ್ಮದ ಜನ್ನಿವಾರವ
ಜೀರ್ಣಗೊಳಿಸುತೆ ತೆಗೆದುಹಾಕಿ
ವರ್ಣಧರ್ಮದ ಮೌಂಜಿ ತ್ಯಜಿಸುತ
ಸ್ವರ್ಣದೊಲು ರಂಜಿಸಿದನು ೧೭

ನವ್ಯಧೋತ್ರವನುಟ್ಟು ಬಸವನು
ದಿವ್ಯವಸ್ತ್ರವ ಧರಿಸಿ ಮೈಯೊಳು
ಭವ್ಯಭವನಾರ್ಥಗಳ ತ್ಯಜಿಸುತ
ಪೂರ್ವದಿಕ್ಕಿಗೆ ನಡೆದನು ೧೮

ಬಸವನಗ್ರಜೆ ನಾಗಲಾಂಬಿಕೆ
ಎಸೆವಪತಿ ಶಿವಸ್ವಾಮಿ ಯೊಡನೆ
ಆಸಮಶಿಶು ಶ್ರೀ ಚೆನ್ನಬಸವನ
ಲೇಸಿನಿಂ ತೆಗೆದಪ್ಪುತೆ ೧೯

ಪತಿಸುತರನೊಡಗೂಡಿನಾಗಲೆ
ಅತಿಹಿತದೊಳುಪಚರಿಸಲನುಜನ
ಪ್ರೀತಿಯಿಂ ಹೊರವಂಟಳಾಗಲೆ
ಖ್ಯಾತಬಸವನ ಜೊತೆಯಲಿ ೨೦

ಬಸವನಗ್ರಜ ದೇವರಾಜನು
ಅಸಮಪ್ರೀತಿಯೊಳನುಜನೊಡಹೊರ-
ಟೆಸೆದು 'ಶ್ರೀ ಕವಿಳಾಸಪುರ' ದಲಿ
ರಸಋಷಿಯು ನೆಲೆಸಿರ್ದನು ೨೧

—:o:—

ಘಟ್ಟ ೩

ಭಾನುಮಂಡಲ ಉದಿಪದಿಕ್ಕಿನ
ಸಾನುಕಿರಿದಂತರದೆ ಬಸವನು
ಕಾಣುತಲಿ ಮಲಪ್ರಹರಿ ಕೃಷ್ಣೆಯ-
ರಣೆಯುರದ ಸಂಗಮವನು ೨೨

ಸಂಗಮದ ಸುಖಸಂಗ ಕೂಡಲ
ಸಂಗಮೇಶ್ವರನಿಪ್ಪ "ಕಪ್ಪಡಿ
ಸಂಗಮದ" ಒಳಹೊಕ್ಕು ಹರಪದ
ಭೃಂಗ ಬಸವನು ನಡೆದಿರೆ ೨೩

ಕೇರಿಕೇರಿಯ ನಡೆದಬಸವನು
ಭೂರಿಶಂಕರ ನಾಲಯವಕಂ-
ಡೇರಿಪೂರ್ವಸ್ಮರಣೆಕೈವಶ
ಸೇರಿಕಣ್ಣುಸಿರ್ಬಂದೊಲು ೨೪

ರಂಗಮಂಟಪದೊಳಗೆ ಬಸವನು
ಸಂಗಭಕ್ತಿಯ ಭರದಿದೊಪ್ಪನೆ
ಸಂಗನೀಂ ಪೊರೆಯೆಂದು ಭಕ್ತಿಯ
ಹಂಗಿಗನು ಬಿದ್ದೇಳ್ದನು ೨೫

ಏಳ್ದ ಬಸವನು ದೇವದೇವನೆ
ಆಳ್ದವನೆ ಅನಿಮಿತ್ತಬಂಧುವೆ
ತಾಳ್ದವನೆ ತಾಯ್ತಂದೆ ಕಾವುದು
ಪೇಳ್ದ ಬುದ್ಧಿಯು ಪೊರೆವುದು ೨೬

ಕುಲವೆ ಬಲವೆ ಛಲವೆ ತವರೆ
ಫಲಿತಪುಣ್ಯವೆ ಗತಿಯೆಮತಿಯೆ
ಲಲಿತವರಕಾರುಣ್ಯ ಮೂರ್ತಿಯೆ
ಅಳಿಮನವ ಪೊರೆಯೆನ್ನುತ ೨೭

ಕರಣವದು ಕಾವೇರಿ ಬಸವನ
ಹರಣಕುಕ್ಕುಳಗುದಿದು ಗದ ಗದ
ಸೆರೆಬಿಗಿದು ದಡದಡಿಸಿ ದೊಪ್ಪನೆ
ಧರೆಗೆ ಮೂರ್ಛಿತನಾಗಲು ೨೮

ಆಗ ಬಸವನ ಚಿತ್ತದೊಳಗೆ
ಬೇಗ ಹರಕರುಣಾಂಕುರವು ತಾ
ಜಾಗೃತಿಯ ಗೊಳಿಸುತ್ತೆ ಧೈರ್ಯದ
ಭಾಗ್ಯವನು ಬೆಸಸುತ್ತಿರೆ ೨೯

ಶಿವನಕರುಣದ ಬೆಸನೆಯಿಂದಲಿ
ನವವಿಕಸಿತಮುದಾಗೆಚಿತ್ತವು
ನವ್ಯಬುದ್ಧಿಯು ಪಲ್ಲವಿಸೆ ನವ
ಜವ್ವನದ ಬಸವಣ್ಣಗೆ ೩೦

ಆ ಸಮಯದೊಳು ಸ್ಥಾನಪತಿ
ಈಶಾನ್ಯಗುರುಗಳು ಕಂಡುಬಸವನ
ಈಶರೂಪನ ಕಾರಣಿಕನನು
ಲೇಸಿನಿಂ ಬಳಿಸಾರ್ದರು ೩೧

ಸಾರಿ ಭಕ್ತನೆ ಪೋಗದಿರು ನೀ
ಬೇರೆ ಚಿಂತೆಗಳೊಂದು ಬೇಡವು
ಸಾರ ಸುಮ ತಿಳಿಯಗ್ಗವಣಿಗಳ
ಓರಣದಿ ತಂದರ್ಚಿಸು ೩೨

ಎಂದು ಬೆಸಸಿದ ಮಾತ ಕೈಗೊಂ
ಡಿಂದುಧರ ಹೃದಯಾಂತರಂಗನು
ಛಂದದಲಿ ಸಂಗಮನ ಪೂಜಿಸಿ
ಕೊಂಡು ವಾಸಿಸುತಿದ್ದನು ೩೩

ಅರುಣನುದಯಿಪ ಹೊದಲೆ ಬಸವನು
ಭರದೊಳೇಳುತ ಭಸಿತ ಧರಿಸುತ
ಹರಗೆಸಾಷ್ಟಾಂಗದಲಿನಮಿಸುತ
ಸರಸಿಯುದಕವ ತರುತಲಿ ೩೪

ಆಳಿಗಳೆರಗದ ಆನಿಲನಲುಗದ
ಸುಳಿದಳದ ಹಸುರಳಿದ ಬಿಳುಪಿನ
ಮೊಲ್ಲೆ ಮಲ್ಲಿಗೆ ಮರುಗ ಸಂಪಿಗೆ
ಎಲ್ಲ ಸುಮಗಳ ತರುತಲಿ ೩೫

ಪೊಂಗಳಸದಗ್ಘವಣಿಯೆರೆದು
ಸಿಂಗರಿಸಿ ಸಿರಿಗಂಧವಿಡುತೆ
ಪೂಗಳನು ಸರಗೊಳಿಸಿ ಧರಿಸುತ
ಸಂಗಮೇಶನ ಪೂಜಿಸಿ ೩೬

ಧೂಪ ಪರಿಮಳ ಧೂಮುವರ್ಪಿಸಿ
ದೀಪದಾರತಿ ಬೆಳಗ ಬೆಳಗುತ
ಪಾಪಹರಗೆ ನಿವೇದಿಸುತೆ ಮಧು
ಕಂಪೆಸೆವ ಪಾಕಂಗಳ ೩೭

ಸ್ತುತಿಸಿ ನವವಿಧ ಭಕ್ತಿಯಿಂದಲಿ
ಅತಿರವದ ಕಹಳಾ ಮೃದಂಗದ
ನುತಿಪ ಶಂಖದ ಭೇರಿರವದೊಳು
ಮುತ್ತು ಮುಕುರವ ತೋರುತ ೩೮

ಪೂಜೆ ಪುರುಷಾಕಾರವಾದೊಲು
ಪೂಜೆಯೊಳು ಚಂದ್ರಮನುದಿಸಿದೊಲು
ಪೂಜಿಸುತ್ತಲಿ ಸಂಗಮೇಶನ
ಓಜೆಯಿಂ ಮೆರೆಯುತ್ತಲಿ ೩೯

ವೇದವೇದಾಂಗಾದಿ ಶಾಸ್ತ್ರಗ-
ಳಾದಿಯಂತ್ಯವನೋದಿ ತಿಳಿಯುತ
ಸಾಧಕಾವಸ್ಥೆಯೊಳು ತಾನತಿ
ಮೋದದಿಂ ಗುರುಕುಲದೊಳು ೪೦

ದಿವಿಜರಲಿ ವಣಿಜರಲಿ ಮತ್ತಾ
ವಿವಿಧ ವೃತ್ತಿಯ ಸಕಲ ಜನರಲಿ
ಶಿವಬಸವನೊಡನಾಡಿ ಅವರೊಳು
ವಿವಿಧತೆಯ ತಿಳಿಯುತ್ತಲಿ ೪೧

ಒಂದು ದಿನ ಸೌರಭ್ಯ ಸಂಯುತ
ಸಂಧ್ಯೆಯಲಿ ಸಂಗಮನ ಪೂಜಿಸಿ
ಹೆಂದದಾನಂದದೊಳು ಬಸವನು
ಸಾಂದ್ರಧ್ಯಾನದೊಳಿರುತಿರೆ ೪೨

ಸ್ಥಾನಪತಿ ಈಶಾನ ಗುರುಗಳು
ನಿನ್ನ ಶಕ್ತಿ ಸಮರ್ಥ ಬುದ್ಧಿಗ
ಳನ್ನು ಬಿಜ್ಜಳರಾಜನೆಡೆಯೊಳ
ಗಿನ್ನು ತೋರಿಸು ಪೋಗೆನೆ ೪೩

ಸನ್ನಿಧಿಯ ಬಿಟ್ಟಗಲಲಾರದೆ
ಖಿನ್ನ ಧ್ಯಾನದೆ ಬಸವನೊರಗಿರೆ
ಚೆನ್ನಸಂಗನು ಸಹಿತ ಕನಸಿನೊ
ಳಿನ್ನು ಪೋಗೆಂದುಸುರಲು ೪೪

ಹರಗುರುಗಳಪ್ಪಣೆಗೆ ಬೆದರುತ
ಪರಮ ಗುರುವೇ ಕೆಟ್ಟೆ ಪೊರೆನೀ-
ನಿರಿದು ಕೊಲುವರೆ ಶಿಶುವ ಪಶುವನು
ಪೊರೆಯೆನುತ ಹಂಬಲಿಸಲು ೪೫

ಬಸವರಾಜನ ಭಕ್ತಿ ವಿರಹವ
ಪಶುಪತಿಯು ತಾ ಸಹಿಸಲಾರದೆ
ಸಸಿನೆಯಿಂದೀಶಾನ ಗುರುಮುಖ-
ದೊಸಗೆಯಿಂದಿಂತೊರೆದನು ೪೬

ನಾಳೆ ಮಧ್ಯಾಹ್ನಕ್ಕೆ ನಂದಿಯು
ಬೋಳಯಿಸಿ ಭಕ್ತಿಯಲಿ ಬೇಡಲು
ತಾಳಿ ಬರುವೆವು ಲಿಂಗರೂಪವ
ಏಳೆನುತ ಸಂತೈಸಲು ೪೭

ಬಸವರಾಜನು ಭೋಂಕನೆದ್ದು
ಭಸಿತ ರುದ್ರಾಕ್ಷೆಗಳ ಧರಿಸಿ
ಶಶಿಧರಾರ್ಚನೆಗೈದು ಬಂದನು
ಎಸೆವ ನಂದಿಯು ಮುಂದಕೆ ೪೮

ಸಂಗಮೇಶ್ವರ ಪದಕಮಲ ಸುಮ
ಭೃಂಗ ಬಸವನು ನೆನೆಯೆ ನಂದಿಯು
ಅಂಗವಿಕಸಿಸೆ ಮುಖದೊಳುದಿಸಿದ
ಲಿಂಗ ಧರಿಸಲು ಬಸವನು ೪೯

ವೃಷಭ ' ಈಶಾನ ' ಗುರುಕರುಣದಿ
ಬಸವನಿಗೆ ಸತ್ತೋಪದೇಶಿಸೆ
ಒಸೆದು ಸಂಗಮ ಲಿಂಗ ಬಸವರು
ವಸುಧೆಯೊಳು ಸತಿಪತಿಗಳೋಲ್ ೫೦

ಇರಲು ಸಂಗನು ಮನದೆ ಬಸವಗೆ
ವರಮನೋರಥಸಿದ್ಧಿಯಾದುದು
ಧರೆಯ " ಮಂಗಳವಾಡ " ಪಟ್ಟಣ-
ಕಿರದೆ ಪಯಣವ ಮಾಡೆನೆ ೫೧

ಇಂತು ಬೆಸಸಿದ ಸಂಗನಾಜ್ಞೆಗೆ
ಅಂತರಂಗದಿ ಬೆದರಿ ಬಸವನು
ಚಿಂತಿಸುತ್ತಕ್ಷರದ ಧೈರ್ಯದೆ
ನಿಂತು ನಿರ್ಧರಗೈಯುತ ೫೨

ಪೋಗಿ ಬಂದಪೆನಯ್ಯ ಗುರುವೆ
ಈಗ ನಿಮ್ಮನೆ ನೆಚ್ಚಿ ಯೆನಲು
ಆಗ ಕರ ಮನ ಭಾವದೊಳಗಿಹೆ
ಬೇಗ ಪಯಣಿಸುಯೆಂದನು ೫೩

ಆಡಿನೋಡಿ ಮಾಡಿದೆಲ್ಲವ
ಕೂಡಿ ಬೆಸಸುತ ಲಾಗಮಾಡುವೆ
ನಡೆ ಮಗನೆ ಎನ್ನುತ್ತ ಶ್ರೀಗುರು
ಪೊಡವಿ ಬೆಳಕಾಗೆಂದನು ೫೪

—:೦:—

ಘಟ್ಟ ೪

ಶ್ರೇಷ್ಠ ಮಂಗಳವಾಡಪುರಕೆ
ದಿಟ್ಟಬಸವನು ಹೊರಟುಬಂದು
ಪಟ್ಟಣವ ಸಂಚರಿಸುತಲ್ಲಿಯು
ಇಟ್ಟಣಿಪ ಸಿರಿ ಕಂಡನು ೫೫

ಬಂದು ಬಿಜ್ಜಳನರಮನೆಗೆ ನಡೆ-
ತಂದು ನೋಡುತ ರಾಜ್ಯಪ್ರಮುಖರ
ಸಂದಣಿಪ ಗಜಘಟೆ ತುರಗರಥ
ಸಾಂದ್ರವೀರರ ಕಾಣುತ ೫೬

ಕರಣಶಾಲೆಗೆ ಬಂದು ಬಸವನು
ಬರೆವಗಣಕರ ನೀಕ್ಷಿಸುತ್ತಲಿ
ಬರೆವ ಗಣಕರುಗಳಿಗೆ ಲಂಚವ-
ನೆರೆವರನು ಕಾಣುತ್ತಲಿ ೫೭

ಬೆರಗಿನೊಳು ಬಸವಣ್ಣನಲ್ಲಿರೆ
ಸರಸಿ ಸಿದ್ಧದಣಾಯಕನು ಬರೆ
ಭರದೊಳಾತನ ಲೆಕ್ಕತೆಗೆಯಿಸೆ
ಕರಣಿಕರು ನೋಡುತ್ತಲಿ ೫೮

ಆಯದೊಳು ಬೀಯುವನು ಕಳೆದು
ಆಯುತದೊಳವರೈದು ಕೋಟಿಯು
ಜಾಯ ಲಕ್ಷಗಳೈದ ತೋರಲು
ರಾಯಬಸವನು ತಪ್ಪನರಿದು ೫೯

ಭಕ್ತನೊಡವೆಯು ಕೇಡಕಂಡು
ಶಕ್ತ ಬಸವನು ಮನದೆ ಮರುಗಿ
ಸೂಕ್ತಿಯೊಳು ದಣ್ಣಾಯಕಗೆ ತಾ
ಲೆಕ್ಕ ಖಂಡಿತ ಪೇಳುತ ೬೦

ಆಯುವಂ ಬೀಯದೊಳು ಕಳೆದುಳಿ-
ತಾಯುಷ್ಥಿತವನು ಐದುಕೋಟಿಯು
ಜೀಯ ಬಸವನು ತೋರಿಸಲು ದ-
ಣ್ಣಾಯಕನು ಕೌತುಕದಲಿ ೬೧

ಕಂಡು ಕಾರಣ ಪುರುಷ ಬಸವನ
ಚಂಡಭೂಪತಿ ಬಿಜ್ಜಳೇಂದ್ರನ
ಮುಂದೆ ಪೊಗಳುತೆ ಕೆಲಸ ನಿಯಮಿಸಿ
ದಂಡಿಗೆಯೊಳ್ ಕರೆದೊಯ್ದನು ೬೨

ಇಳಿಸಿ ಮನೆಯೊಳು ಬಸವರಾಜನ
ಸಲಹುತಲಿ ಸಕಲೋಪಚಾರದಿ
ಕುಲವು ಗೋತ್ರಗಳೊಂದುಗೂಡಲು
ಮಲೆತು ಹೆಚ್ಚಿನಹಿಗ್ಗಿನಿಂ ೬೩

ದಿನದಿನಕೆ ರಾಜ್ಯಾಂಗ ಕಾರ್ಯದೊ-
ಳುನ್ನತೋನ್ನತ ಸ್ಥಾನಕೇರಿಸಿ
ವಿನಯಗುಣ ಕರ್ತವ್ಯದಕ್ಷತೆ-
ಯನ್ನು ಕಾಣುತೆ ಹಿಗ್ಗುತೆ ೬೪

ಎನ್ನ ತೇಜಸ್ಸಂಪದಂಗಳು
ನಿನ್ನವೈ ಬಸವಣ್ಣ ಎನ್ನುತ
ಸನ್ನುತಿಸಿ ಬಹು ವೈಭವೋನ್ನತ-
ದಾನೆಯೇರಿಸಿ ಮೆರೆಯಿಸೆ ೬೫

ಪರಮ ಸುಖದಿಂ ಬಸವರಾಜನು
ಅರಮನೆಯೊಳಾನಂದದಿಂದಲಿ
ಹರಶರಣ ಚರಣಾರವಿಂದವ
ನಿರುತ ಪೂಜಿಸುತಿರ್ದನು ೬೬

ಇಂತು ನಾನಾವಿಧದಿ ಬಸವನು
ಕಂತುಹರನರ್ಚನೆಯೊಳಿರುತಿರೆ
ಮಂತ್ರಿ ಸಿದ್ದಣ್ಣಾಯಕಾಖ್ಯಗೆ
ಅಂತ್ಯಕಾಲವುದೊದಗಲು ೬೭

ಬಿಜ್ಜಳೇಂದ್ರಾದೇಶದೊಲು ಆ-
ಸಜ್ಜನನ ಸಂಸ್ಕರಿಸಿ ಆತನ
ವಜ್ರವೈಡೂರ್ಯಾದಿ ಸಂಪದ
ಬಿಜ್ಜಳೇಂದ್ರಗೆ ಕಳುಹಿಸೆ ೬೮

ಕರೆಸಿ ಬಸವನ ಬಿಜ್ಜಳೇಂದ್ರನು
ಇರದ ಪುತ್ರಕ ಮಂತ್ರಿ ಸಂಪದ
ಭರವನೀಂ ಸ್ವೀಕರಿಪುದೆನ್ನುತ
ಕರಪಿಡಿದು ಬಿನ್ನೈಸುತ ೬೯

ಸರ್ವಭಂಡಾರ ವಿದುನಿನ್ನದು
ಉರ್ವಿಶಿಕ್ಷೆಯು ರಕ್ಷೆ ನಿನ್ನದು
ಸರ್ವತೇಜಭಿಮಾನ ನಿನ್ನದು
ಶರ್ವಭಕ್ತನೆ ಎನ್ನುತ ೭೦

ಪಟ್ಟುಪಟ್ಟಾವಳಿಯ ನರ್ಪಿಸಿ
ಪಟ್ಟಮಂತ್ರಿಯ ಪದವಿಯರ್ಪಿಸಿ
ಪಟ್ಟಣವ ಸಿಂಗರಿಸಿ ಸಾರಿಸಿ
ಪಟ್ಟದಾನೆಯ ನೇರಿಸಿ ೭೧

ಮುಂದೆ ಭೇರೀಕಹಳೆ ಮೊರೆಯಲು
ವಂದಿಗಾಯಕರೆಲ್ಲ ಪಾಡಲು
ಸಂದಣಿಪ ಪುರರಾಜ ವೀಥಿಗ-
ಳೊಂದು ತಪ್ಪದೆ ಮೆರೆಸಲು ೭೨

ಪರಮ ಸುಖದೊಳು ಸೇರಿ ಅರಮನೆ
ಶರಣಪದ ಸರಸಿಜಮನಪ್ಪುತ
ಹರಶರಣ ಕಲ್ಪತರು ಬಸವನು
ನಿರುತ ಭಕ್ತಿಯೊಳಿರುತಲಿ ೭೩

ಸುಗುಣ ಸತ್ಕುಲ ಸೌಂದರಿಯುಗಳ
ರಾಗರಂಜಿತೆ "ನೀಲಲೋಚನೆ"
ಭಾಗ್ಯವತಿ "ಗಂಗಾಂಬೆ" ಯರುಗಳ-
ನಾಗ ಪರಿಣಯುಗೊಂಡನು ೭೪

ಬಳಿಕ ಗಂಗಾದೇವಿಯುದರದೆ
ಲಲಿತಲಾವಣ್ಯದ ಕುವರತಾ-
ನಿಳೆಗುದಿಸಿ "ಸಿದ್ಧರಸ'' ನಾಮದೆ
ಹೊಳೆದು ಬೆಳೆಯುತಲಿರ್ದನು ೭೫

—:o:—

ಘಟ್ಟ ೫

ದಂಡನಾಯಕ ಬಸವರಾಜನು
ಮುಂದೆ ಶೈವದ ಕೊಳೆಯು ತೊಳೆಯುತ
ಸಂದಣಿಪ ಪರವಾದಿ ಜನಗಳ
ನಿಂದು ಜಯಿಸುತ ಮೆರೆದಿರೆ ೭೬


ಅಂಗವಂಗ ಕಳಿಂಗ ಕಾಶ್ಮೀ-
ರಂಗಳಾದಿಯ ದೇಶದೇಶದ
ಲಿಂಗಭಕ್ತ ಜನಂಗಳೆಲ್ಲರು
ಸಂಗಬಸವನ ಭಕ್ತಿಯ ೭೭

ಕೀರ್ತಿ ಮಹಿಮೆಯ ಕೇಳುತೆಲ್ಲರು
ಆರ್ತಿಯಿಂ ಬಂದಲ್ಲಿ ನೆರೆಯುತ
ವೃತ್ತಿಗಳ ಕೈಗೊಳ್ಳುತೆಲ್ಲರು
ಕರ್ತೃ ಬಸವನ ಕಂಡರು ೭೮

ದೆಸೆದೆಸೆಯ ಜನ ನಿವಹದೊಳಗಣ
ಅಸಮ ಪ್ರಾಜ್ಞರ ಕಾಣುತವರನು
ಬಸವನೊಂದೆಡೆ ಕೂಡಿ ಚರ್ಚಿಸ
ಲೊಸಗೆಯಿಂದೇರ್ಪಡಿಸಿದ ೭೯



ಶ್ರೀ ಬಸವಣ್ಣನವರು
ಮಹಾಮಂತ್ರಿ ಪದವಿಯಲ್ಲಿ



ಶ್ರೀ ಬಸವಣ್ಣನವರ ಪತ್ನಿ

ಶ್ರೀ ನೀಲಾಂಬಿಕಾದೇವಿಯವರು

ಅಂತು ಕೂಡಿದ ಪ್ರಾಜ್ಞರೆಲ್ಲರು
ಸ್ವಂತ 'ಅನುಭವ'ಗಳನು ವಿವರಿಸಿ
ಪಂಥಪಂಗಡ ಮೇಲುಕೀಳ್ಗಳ
ನೆಂತು ಇರದೊಲು ಗೈಯುಲು ೬೦

ಪರಮಭಾಕ್ತಿಕ ಚಕ್ರವರ್ತಿಯು
ವರಜಗದ್ಗುರು ಪ್ರಭುವನಾವಗ
ಮೆರೆವ "ಅನುಭವ ಮಂಟಪಾ" ಧೀ-
ಶ್ವರನ ಮಾಡಲು ಭಕ್ತಿಯಿಂ ೬೧

ಬಸವರಾಜನ ಎಸೆವ ಅಳಿಯನು
ಅಸಮ ಪ್ರಾಜ್ಞನು ಚೆನ್ನಬಸವನು
ಒಸೆದು ಶ್ರೀಗುರು ಸಿದ್ಧರಾಮಾ-
ದ್ಯಸಮ ಮಹಿಮರು ನೆರೆಯುತ ೬೨

ಅಕ್ಕಮಹದೇವಿಯರು ಮತ್ತಾ
ಮುಕ್ತೆಮುಕ್ತಾಯಕ್ಕ ಮೊದಲಹ
ಶಕ್ತೆ ಲಿಂಗಮ್ಮಾದ್ಯರೆಲ್ಲರು
ಸೂಕ್ತಿಯಿಂ ಚರ್ಚಿಸುತಲಿ ೬೩

ವೀರಮಡಿವಳ ಮಾಚಿದೇವರು
ಧೀರ ಅಂಬಿಗಚೌಡಯಾದ್ಯರು
ಸಾರಮಹಿಮರು ಚರ್ಚಿಸುತ್ತೆ ಅ-
ಪಾರತತ್ವವ ಯೋಚಿಸಿ ೬೪

ಬುದ್ಧಿಬಲ ಪಾಂಡಿತ್ಯ ಅನುಭವ
ಶುದ್ಧ ತತ್ವಾರ್ಥಗಳ ಶೋಧಿಸಿ
ಶುದ್ಧ ಶೈವವನುದ್ಧರಿಸಿ ಬಹು
ಶುದ್ಧ ಜನರನು ಹೆಚ್ಚಿಸಿ ೬೫

ಸಾರ ಅನುಭವ ಮಂಟಪದೆ ನೆರೆ-
ದಾರುಸ್ಥಲ ಶಾಸ್ತ್ರವನು ನಿರ್ಮಿಸಿ
"ವೀರಶೈವ ಸುಧರ್ಮ ಸ್ಥಾಪಿಸಿ"
ಸಾರಿ ನಿರ್ಣಯ ಗೈದರು ೬೬

ಮುಂದೆ ಕೊಂಡೆಯ ಕೇಳಿ ಬಿಜ್ಜಳ
ಮಧುವರಸ ಹರಳಯ್ಯಗಳಿಗೆ
ವಿಧಿಸಿದಾ ಎಳೆಯೂಟ ಶಿಕ್ಷೆಗೆ
ಕ್ರೋಧಗೊಂಡರು ಶರಣರು ೮೭

ರಾಗದ್ವೇಷದ ತಾಣವನು ಬಿ-
ಟ್ಟಾಗ ಸಂಗನ ಬಸವರಾಜನು
ಬೇಗ ಬೀಳ್ಕೊಳ್ಳುತ್ತ ಕಪ್ಪಡಿ
ಲಿಂಗ ಸಂಗದೊಳಿದ್ದನು ೮೮

—:o:—

ಘಟ್ಟ ೬

ವೀರಶೈವವ ಧರೆಗೆ ಸ್ಥಾಪಿಸಿ
ಮಾರಹರನ ಸ್ವರೂಪಿ ಬಸವನು
ಧಾರಿಣಿಯನುದ್ಧರಿಸಲೋಸುಗ
ಸಾರಿಪೋದುಬ ಕೇಳಿರಿ ೮೯

ನಾದವೇದಂಗಳು ಶಿವಂಗೆ
ನೋದದಾಯಕವಲ್ಲವಾದರು
ಸಾದರದ ಸದ್ಭಕ್ತಿತಾನತಿ
ಮೋದದಾಯಕ ಮಪ್ಪುದು ೯೦

ಒಳಗೆ ಕುಟಿಲವ ಹೊರಗೆ ವಿನಯವ
ಬಲ್ಲನೊಲ್ಲನು ಲಿಂಗದೇವನು
ಇಲ್ಲಿ ಸಲ್ಲುವರಲ್ಲಿ ಸಲ್ವರು
ಎಲ್ಲ ಭಕ್ತರು ಕೂಡಿರಿ ೯೧

ಜಾತಿಯಿಂ ಸೂತಕವ ನರಸದೆ
ಜೋತಿಯಿಂ ಕತ್ತಲೆಯ ನರಸದೆ
ಪ್ರೀತಿಯಿಂ ಬೆಸಗೊಂಡು ಭಕ್ತ-
ವ್ರಾತದೊಳು ಸಮರಸಿಪುದು ೯೨

ತನ್ನ ಊಟವ ತನ್ನ ರತಿಸುಖ
ವನ್ನು ಬೇರೆಯರಿಂದ ಮಾಳ್ಪುದೆ ?
ತನ್ನಲಿಂಗದ ನಿತ್ಯನೇಮವ
ತಾನೆ ಮಾಳ್ಪುದು ವಿಹಿತವು ೯೩

ಕಂಡ ಭಕ್ತಗೆ ಕೈಯಮುಗಿಯುತ
ಮೃದು ವಚನಗಳ ನುಡಿದು ನಡೆಯುತ
ಸದುವಿನಯದಿಂ ವರ್ತಿಸುವುದು
ಸದಾಶಿವಂಗತಿ ಒಲುಮೆಯು ೯೪

ದಯವುಇಲ್ಲದ ಧರ್ಮವಾವುದು ?
ದಯವೆ ಧರ್ಮದ ಮೂಲವಯ್ಯ
ದಯೆ ಸಕಲ ಜೀವಾತ್ಮರಲ್ಲಿಡಿ
ಅಯ್ಯ ಸಂಗನುನೊಲಿವನು ೯೫

ಕೊಲ್ಲುವನೆ ಮಾದಿಗನು ತಾನಾ-
ಹೊಲಸ ತಿಂಬನೆ ಹೊಲೆಯನಪ್ಪನು
ಕುಲ ಅವಂದಿರ ಕುಲವದೇನೈ
ಒಳಿತನೆಲ್ಲಕೆ ಬಯಸಿರಿ ೯೬

ಕಳದೆ ಕೊಲ್ಲದೆ ಹುಸಿಯ ನುಡಿಯದೆ
ಹಳಿಯದಿದಿರನು ತನ್ನ ಹೊಗಳದೆ
ಎಲ್ಲರೊಳು ಮುನಿಯದೆಲೆ ಜೀವಿಪು-
ದೊಳಹೊರಗೆ ತಾ ಶುದ್ಧಿಯು ೯೭

ವ್ಯಾಸಬೋಯಿತಿ ಮಗನು ಮಾರ್ಕಂ-
ಡೇಶ ಮಾತಂಗಿಯ ಮಗನು ದೂ-
ರ್ವಾಸ ಮುಚ್ಚಿಗನಾದ ಕಾರಣ
ಈಶಭಕ್ತನೆ ಕುಲಜನು ೯೮

ಕಾಸಿ ತಾ ಕಮ್ಮಾರನಾಗುವ
ಬೀಸಿ ತಾ ಮಡಿವಾಳನಾಗುವ
ಲೇಸು ಓದಲು ವಿಪ್ರನಾಗುವ
ಈಶಭಕ್ತನೆ ಕುಲಜನು ೯೯

ಪರಮನೊಬ್ಬನೆ ನಾಮ ಹಲವು
ವರಪತಿವ್ರತೆಗೊಬ್ಬ ಗಂಡನು
ಇರದೆ ಮತ್ತೊಂದಕ್ಕೆ ಎರಗುವ
ನರನು ತಾನತಿಮೂಢನು ೧೦೦

ಈ ಬಗೆಯ ಅಗಣಿತ ವಚನಗಳ
ಸೊಬಗಿನಿಂ ಧರೆಗೊರೆದು ನಡೆದಿಹ
ಶ್ರೀ ಬಸವರಾಜೇಂದ್ರ ದೇವನ
ವಿಬುಧರೆಲ್ಲರು ನುತಿಪುದು ೧೦೧

ಕಾಮಕ್ರೋಧವು ಲೋಭ ಮೋಹವು
ಆ ಮಹಾಮದ ಮತ್ಸರಿಲ್ಲದ
ಸಾಮರ್ಥ್ಯವ ನೀ ಧರೆಗೆ ಬಿತ್ತಿ ನಿ-
ಷ್ಕಾಮ ಭಕ್ತಿಯ ಬೆಳೆದನು ೧೦೨

ಹರಸಮಯ ಜಲನಿಧಿಗೆ ಚಂದ್ರಮ
ಪರಸಮಯ ಸಂಹರಣ ಶೂರನು
ಧರೆಗೆ ಧರ್ಮದ ಬೆಳಕ ಚೆಲ್ಲಿದ
ಹರನು ಗುರು ಬಸವಣ್ಣನು ೧೦೩

ಬಸವ ಕೀರ್ತಿಯ ಪುಣ್ಯಲತೆಯದು
ದೆಸೆದೆಸೆಗೆ ತಾ ಹಿಗ್ಗಿ ಬೆಳೆಯುತೆ
ಕುಸುಮಿತದೆ ಸೌರಭವ ಹರಡುತ
ಪಸರಿಸುತ ಫಲಬಿಡುತಿದೆ ೧೦೪

ಶಾಂತಿ ಪುರುಷನು ಬಸವರಾಜನು
ಕಾಂತಿಪುರುಷನು ಬಸವರಾಜನು
ಕ್ರಾಂತಿಯಿಂ ಶಾಂತಿಯ ನೆಲೆಸಿದ ಮ-
ಹಾಂತ ಮೂರುತಿ ಬಸವನು ೧೦೫

ಅಣ್ಣನೊಲು ಜಗಜನವ ಶ್ರೀ ಬಸ-
ವಣ್ಣ ಕರುಣೆಯ ಮೈತ್ರಿಪ್ರೇಮದ
ಕಣ್ಣಿನಿಂ ನೋಡುತ್ತೆ ಪೊರೆದಿಹ
ಪುಣ್ಯಚಿನ್ಮಯ ಮೂರುತಿ ೧೦೬

ಸಂಗಸರಸಿಯ ಬಾಲಹಂಸನು
ಸಂಗಸಮರಸ ಚಿತ್ತ ಬಸವನು
ಜಂಗಮದ ವರ ಪ್ರಾಣಬಸವನು
ಮಂಗಳವ ಜಗಕೀಯಲಿ ೧೦೭

ಬಸವ ಶರಣರ ಚರಣಕಿಂಕರ
ಶಿಶುವು ಮಾ. ನಂ. ನಂಜಪಾಖ್ಯನು
ರಸೆಗೊರೆದ ಈ ಕೃತಿಯು ಜಗಕತಿ
ಸಸಿನೆ ಮಂಗಳವೀಯಲಿ ೧೦೮

ಮಂಗಳಂ

—:೦:—

ಶ್ರೀ ಮೈಲಾರ ಬಸವಪ್ಪ ಶರಣರು ರಚಿಸಿದ
ಶ್ರೀ ಬಸವೇಶ್ವರ ಸ್ತೋತ್ರಪದ್ಯ

—೦—

ಆದಿತಾಳ

ಬಸವಲಿಂಗ ನೆಂಬೈದಕ್ಷರಗಳು । ರಸನೆಯೊಳಿರಬೇಕು ।
ಶಶಿಕಾಂತದೊಳಿಹ ರಸದ ಪರಿಯೊಳೀ ವಸುಧೆಯೊಳಿರಬೇಕು ॥ಪಲ್ಲವಿ॥
ಆರುಹಿನ ಕುರುಹಿಡಿದವನಿ । ತಳದೊಳವತರಿಸಿದ ಗಣಪಾಲಾ ।
ವರ ಗುರುಲಿಂಗ ಸುಜಂಗಮ ಸೌಖ್ಯಾಕರ ಪಾಲನ ಶೀಲಾ ॥
ಪರಮ ಷಡಕ್ಷರ ಪಂಚಾಕ್ಷರ ವೆಂಬೆರಡರಾದಿ ಮೂಲಾ ।
ಶರಣರ ಕರಮನ ಭಾವದಿಂದುಪಚರಿಸಿಕೊಂಬಲೋಲಾ ॥ ೧ ॥

ವೇದಶಾಸ್ತ್ರ ಪೌರಾಣ ನಿಗಮ ದಧಿಮಥನದ ನವನೀತ ।
ಸಾದಾಖ್ಯದೊಳಿಹ ನಾದಬಿಂದು ಕಳೆಗತ್ತಲತ್ತತೀತ ।
ಮೂದೇವರ ಮುತ್ತಯ್ಯನ ಪೊತ್ತು ಸಲಹಿದನ್ನದಾತ ।
ಭೇದಿಸಲಗಣಿತ ಬ್ರಹ್ಮಾಂಡಂಗಳ ಧರಿಸಿದ ಪ್ರಖ್ಯಾತಾ ॥ ೨ ॥

ಭಕ್ತಿಗೊಲಿದ ನಿರುಪಾಧಿಕ ಸದ್ಭಕ್ತ ರಂತರಂಗ ।
ಮುಕ್ತಿಯ ಸೀಮೆಯ ಮೆಟ್ಟಿದವರ ಬಹಿರಂಗ ಇಷ್ಟಲಿಂಗ ।
ಯುಕ್ತಿಯಿಂದ ಸದ್ಭಕ್ತಿಯ ಮಾಡುವರಂಗಲಿಂಗಸಂಗ ।
ಶಕ್ತಿ ಸಮೇತ ವಿರಕ್ತಿಯ ಕೊಡುವ ದೇಶಿಕ ರುತ್ತುಂಗ ॥ ೩ ॥

ಕಲಿಯುಗದೊಳು ಕಲ್ಯಾಣ ಪುರವರಾಧೀಶ ಪ್ರಧಾನಿ ।
ಹಲಬರ ಮಧ್ಯದಿ ಬಿದ್ದ ಲಿಖಿತ ತೆಗೆದೋದಿದ ಸಂಧಾನಿ ।
ಕುಲಛಲ ಮೊದಲಾದಷ್ಟಮದಂಗಳ ನೀಗಿದ ಸುವಿಧಾನಿ ।
ನೆಲಜಲಾಗ್ನಿ ಮರುತಾಂಬರಾತ್ಮ ಪರತತ್ವದ ಸುಯಿಧಾನಿ ॥ ೪ ॥

ಭಿನ್ನಭಕ್ತಿ ಯೆನಗನ್ಯವೆಂಬ ಸದ್ಭಕ್ತ ದೇಹಿಕದೇಹಿ ।
ತನ್ನ ಭಜಿಸಿ ಬಳಿಕನ್ಯವನರಿಯದ ಸಜ್ಜನ ಜನಮೋಹಿ ।
ಚಿನ್ನಬಣ್ಣ ದಂತರವರಿಯದ ಶಿವಶರಣರಲ್ಲಿ ಸ್ನೇಹಿ ।
ಚನ್ನವೀರ ಮಾಹೇಶ ನಿರಂಜನ ಜಂಗಮ ದಾಸೋಹಿ ॥ ೫ ॥

—ಃ ಮಂಗಳಂ ಃ—

ಕಠಿಣಶಬ್ದಗಳ ಅರ್ಥ

ಅ

ಅಗ್ರಜ	ಅಣ್ಣ
ಅಘ್ನವಣಿ	ಉದಕ-ನೀರು
ಅತ್ಯ್	ಅತಿಶಯ
ಅನಿಲ	ಗಾಳಿ
ಅಣೆಯುರದ	ಅತಿಶಯದ-ವಿಶಾಲವಾದ
ಅಪುತ್ರಕ	ಮಕ್ಕಳಿಲ್ಲದವ
ಅಲರು	ಹೂವು
ಅಸಮ	ಸಮಾನರಿಲ್ಲದ
ಅಳಿ	ದುಂಬಿ

ಆ

ಆಗರ	ಗಣಿ
ಆದೇಶ	ಸೂಚನೆ-ಅಪ್ಪಣೆ
ಆಯ	ಸಂಪಾದನೆ

ಇ

ಇಂದುಧರ	ಚಂದ್ರನನ್ನು ಧರಿಸಿದವ-ಶಿವ
ಇಟ್ಟಣಿಸ	ದಟ್ಟವಾದ-ಕಿಕ್ಕಿರಿಯುವ

ಉ

ಉರ್ವಿ	ಭೂಮಿ

ಓ

ಓಜೆ	ಕ್ರಮ

ಕ

ಕರಣ	ದೇಹ
ಕರಣಸಾಲೆ	ಬರೆಯುವ ಮನೆ

ಕಠಿಣಶಬ್ದಗಳ ಅರ್ಥ

ಕಾರಣಿಕ	ಮಹತ್ಕಾರ್ಯ ಸಾಧನೆಗೆ ಹುಟ್ಟಿದವ
ಕಿರಿದಂತರದೆ	ಕೊಂಚ ದೂರದಲ್ಲಿಯೆ

ಗ

ಗಜಘಟೆ	ಆನೆಯ ಪಡೆ
ಗಣ	ಶಿವಲೋಕದ ವ್ಯಕ್ತಿ
ಗಣಕ	ಲೆಕ್ಕ ಬಲ್ಲವ

ಜ

ಜವ್ವನ	ಹರೆಯ-ತಾರುಣ್ಯ
ಜೀರ್ಣಗೊಳಿಸುತ	ಕಿತ್ತು ಹಾಕುತ್ತಾ

ತ

ತ್ರಿಪುಂಡ್ರ	ಮೂರು ಗೆರೆಗಳು
ತುರುಬು	ಜಡೆಮುಡಿ

ದ

ದಣಾಯಕ	ದಂಡನಾಯಕ–ಸೇನಾಪತಿ
ದಂಡಿಗೆ	ಪಲ್ಲಕ್ಕಿ
ದಿಟ್ಟಿಮೂರರನ	ಮೂರುಕಣ್ಣುಗಳುಳ್ಳವನ
ದಿವಿಜ	ದೇವತೆ

ನ

ನಯನ	ಕಣ್ಣು
ನವ್ಯ	ಹೊಸ

ಪ

ಪರವಾದಿ	ಸ್ವಧರ್ಮ ವಿರೋಧಿ
ಪರಿಣಯ	ಮದುವೆ

ಬ

ಬೀಯ	ಖರ್ಚು
ಬೆಸಸು	ಆಜ್ಞಾಪಿಸು-ತುಂಬಿಸು
ಬೋಳಯಿಸಿ	ಉಪಚರಿಸಿ-ಸಮಾಧಾನಿಸಿ

ಭ

ಭಸಿತ	ವಿಭೂತಿ
ಭಾನುಮಂಡಲ	ಸೂರ್ಯಪ್ರಭೆ
ಭಾವಜಾರಿ	ಕಾಮನವೈರಿ

ಮ

ಮಾರಹರ	ಮನ್ಮಥನನ್ನು ಸುಟ್ಟವ
ಮಿಸುನಿ	ಬಂಗಾರ
ಮುಕುರ	ಕನ್ನಡಿ
ಮುತ್ತಬ್ಬೆ	ಅಜ್ಜಿ
ಮೋಹ	ಸಂತೋಷ

ರ

ರಸೆ	ಭೂಮಿ

ವ

ವಣಿಜ	ವ್ಯಾಪಾರಿ
ವರ್ಣಕರ್ಮ	ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಈ ನಾಲ್ಕು ವರ್ಗದ ಜನರು ಸುಖಪ್ರಾಪ್ತಿಗಾಗಿ ಆಚರಿಸುವ ಯಜ್ಞಾದಿ ಕರ್ಮಗಳು
ವೃತ್ತಿ	ಕಾಯಕ-ಉದ್ಯೋಗ
ವ್ರಾತ	ಸಮೂಹ

ಸ

ಸನಾತನ	ಬಹಳ ಹಳೆಯದಾದ
ಸಮರಸ	ಒಂದು ಗೂಡುವಿಕೆ
ಸಸಿನೆ	ಚೆನ್ನಾಗಿ
ಸಂಗಮ	ಎರಡು ನದಿಗಳ ಕೂಟ
ಸಂಗ – / ಸಂಗಮೇಶ್ವರ	ಬಸವೇಶ್ವರನು ವಾಸಿಸುತ್ತಿದ್ದ ಕಪ್ಪಡಿ-ಕ್ಷೇತ್ರದ ಅಧಿದೇವತೆ
ಸಾಗರ	ಸಮುದ್ರ
ಸಾನು	ಪ್ರಶಸ್ತವಾದ
ಸಾರಿಸಿ	ಡಂಗುರವ ಹೊಯಿಸಿ
ಸ್ವಾಯಂಭು	ತಾನಾಗಿ ಹುಟ್ಟಿದುದು
ಸುಧೆ	ಅಮೃತ

ಹ

ಹರಣ	ಪ್ರಾಣ

ನಮ್ಮಲ್ಲಿ ದೊರೆಯುವ ಪುಸ್ತಕಗಳು.

	ರೂ.	ಆ.	ಕಾ.
ಲಿಂಗಪೂಜೆಯ ಐತಿಹಾಸಿಕ ವಿವೇಚನೆ	೦	೨	೦
Musings of Basava	1	0	0
ಪ್ರಭುಲಿಂಗ ಲೀಲೆ	೨	೮	೦
ಚನ್ನಬಸವ ಪುರಾಣ	೬	೦	೦
ಶಂಕರದಾಸಿಮಯ್ಯ ಪುರಾಣ	೨	೮	೦
ಮಹಾದೇವಿಯಕ್ಕನ ವಚನಗಳು	೦	೧೦	೦
ಹೊಸ ಪದ್ಧತಿಯ ಬಸವೇಶ್ವರ ವಚನಗಳು	೧	೮	೦
ಶೂನ್ಯ ಸಂಪಾದನೆ	೩	೧೨	೦
ವಚನಶಾಸ್ತ್ರಸಾರ ಭಾಗ ೧ (ಪೂರ್ವಾರ್ಧ)	೪	೦	೦
ವಚನಶಾಸ್ತ್ರಸಾರ ಭಾಗ ೧ (ಉತ್ತರಾರ್ಧ)	೩	೦	೦
ವಚನಶಾಸ್ತ್ರಸಾರ ಭಾಗ ೨	೫	೦	೦
ವಚನಶಾಸ್ತ್ರಸಾರ ಭಾಗ ೩ (ಪೂರ್ವಾರ್ಧ)	೨	೮	೦
ಹರಿಹರನ ರಗಳೆಗಳು (ಭಾಗ ೨ ರಿಂದ ೭ ರ ವರೆಗೆ)	೪	೯	೦
ಶಿವಾನುಭವ ಸೂತ್ರ	೧	೦	೦
ಭಕ್ತಿಯ ವಚನಗಳು	೦	೧೧	೦
ಅವಧೂತಗೀತೆ	೦	೨	೬
ಕೆಳದಿ ಸಂಸ್ಥಾನದ ರಾಯರ ವಂಶಾವಳಿ	೦	೨	೬
ಭಾರತದವೀರ ಮಹಿಳೆಯರು	೧	೮	೦
ಶಿವಶರಣರ ಚರಿತ್ರೆಗಳು	೧	೧೨	೦
ಶಬರಶಂಕರ ವಿಳಾಸಂ	೨	೦	೦
ವೀರೇಶ ಚರಿತೆ	೨	೦	೦
ಪುರಾತನರತ್ರಿವಿಧಿ	೧	೦	೦
ಹಿಂದೂಸ್ಥಾನವೂ ಹಿಂದೂಗಳೂ	೦	೪	೦

ಇತ್ಯಾದಿ ಇತ್ಯಾದಿ

ದೊರೆಯುವ ಸ್ಥಳ :

ಮಾ. ನಂ. ಶಿವಪ್ಪ ಸಹೋದರರು

ಒಡೆಯರು :— ವೀರಶೈವ ಸಾಹಿತ್ಯ ಭಾಂಡಾರ, ಚಿಕ್ಕಪೇಟೆ ಚೌಕ

ಬೆಂಗಳೂರು ನಗರ.